ಬಂದಿರೂದು..'

'ಹಂಗಲ್ಲ ಶಶಿ...ಯಾರೋ ಹೇಳಿದ ಮಾತುಗಳನ್ನ ನಂಬಾಕತ್ತಿ...ನನ್ನ ಮಾತಿನ ಮ್ಯಾಲ ನಂಬಿಕೆ ಇಲ್ಲವಲ್ಲ ನಿನಗ'

'ಯಾರ್ದೋ ಮಾತ ಕೇಳಿ ನಾನು ಈ ಮಾತನ್ನ ಹೇಳಾಕತ್ತಿಲ್ಲ. ಸ್ವಂತ ನಾನ... ಕಣ್ಣಿಂದ ನೋಡಿ ಈ ನಿರ್ಧಾರಕ್ಕ ಬಂದಿನಿ' ಅವಳ ಮಾತಿನಲ್ಲಿ ದೃಢತೆ ಇತ್ತು. 'ಅದೇನು ನಾನ ಮಾಡಬಾರದ್ದನ ನೋಡಿ ಹಿಂಗ ಹೇಳತಿ ನೀನ'

'ಅದನ್ನ ನನ್ನ ಬಾಯಿಂದ ಕೇಳ್ಬೇಕಾ ನೀ...? ನಿನ್ನ ಮನಸಿಗೆ ಕೇಳ್ಕೋ ನೀ ಏನು ಮಾಡಿದ್ದಿ ಅಂತ...'

'ನಾಯೇನು ಮಾಡಬಾರದ ಮಾಡಿಲ್ಲ. ಎಲ್ಲಾರೂ ಮಾಡೂದನ್ನ ಕುಡಿಯೋದು, ತಿನ್ನೋದು ಮಾಡೀನಿ. ಅದರಾಗೇನ ತಪ್ಪು...?'

'ಇಷ್ಟ ಆಗಿದ್ರ ಕ್ಷಮಿಸಬಹುದಾಗಿತ್ತ. ಆದ್ರ ಭವ್ಯಳಿಗೆ ನೀ ಮಾಡಿದ್ದು ಸರೀನಾ..?' ಆ ಮಾತನ್ನು ಕೇಳಿ ಆತನ ಮುಖ ವಿವರ್ಣಕ್ಕೆ ತಿರುಗಿತು. ಆತ ಕೋಪದಲ್ಲಿಯೇ,

'ಓಹೋ ಆ ವಿಷ್ಯಾನೂ ಗೊತ್ತನ ನಿನಗ, ಆತಬಿಡ ಗೊತ್ತಾದ ಮ್ಯಾಲ ಎಲ್ಲ ಹೇಳ್ತೇನಿ ಕೇಳ. ಅವಳು ಮೊದಲಿಂದಾನು ನನ್ನ ಪ್ರೀತಿಸುತ್ತಿದ್ದಳ. ಯಾವಾಗ ನಮ್ಮಿಬ್ರ ಮದುವೆ ಬಗ್ಗೆ ಮನಿಯಾಗ ತೀರ್ಮಾನಿಸಿದ್ರೂ ಆವಾಗ ಅವಳನ್ನ ನನ್ನಿಂದ ದೂರಾಗ ಅಂದಿದ್ದೆ. ಆದ್ರ ಕೇಳಲಿಲ್ಲ. ಅದಕ್ಕ ಆಕಿ ಆತ್ಮಹತ್ಯೆ ಮಾಡಿಕೊಂಡ್ರ ನಾಯೇನ ಮಾಡಲಿ..?'

'ನಾಚಿಕೆ ಆಗೋದಿಲ್ಲಾ ಹಿಂಗ ಹೇಳಲಿಕ್ಕ.. ಮಾಡೂದೆಲ್ಲಾ ಮಾಡಿ ಹಿಂಗ ಹೇಳಾಕಹತ್ತಿಯಲಾ ಮನುಷ್ಯಾನ ನೀನ. ಅವಳು ಆತ್ಮಹತ್ಯೆ ಮಾಡಿಕೊಳ್ಳಲಿಕ್ಕ ನೀ ಆಕಿನ ತಾಯಿಯಾಗುವಂತೆ ಮಾಡಿದ್ದಕ ಅಲ್ಲನ ಆಕಿ ತನ್ನ ಪ್ರಾಣ ಕಳೆದುಕೊಂಡದ್ದ. ಈಗ ಆಕಿ ಮ್ಯಾಲ ಅಪವಾದ ಹೊರಿಸ್ತಿ. ನಿನ್ನಂಥಾವನ ನಾ ಸತ್ರೂ ಮದುವಿ ಆಗೂದಿಲ್ಲ. ಯಾವುದಾದ್ರೂ ಹೊಳಿಗೆ ಬಿದ್ದು ಸಾಯ್ತಿನಿ. ನಿನ್ನನ್ನ ಯಾವತ್ತೂ ಲಗ್ನ ಆಗೂದಿಲ್ಲ ತಿಳ್ಕೋ' ಎಂದು ಕೋಪದಿಂದ ಅವಳು ಹೋಗಬೇಕೆಂದು ಮೇಲೆದ್ದಳು.

'ಇದ ಕಡಿ ಮಾತಾ ನಿನ್ನದ..?'

'ಹೌದ ಇದ ಮಾತ. ನಿನ್ನಂಥವನಿಂದ ತಾಳಿ ಕಟ್ಟಿಸೋ ಬದಲಾಗಿ ಗಿಡಕ ಉರುಳು ಹಾಕಿಕೊಳ್ಳೊದು ಎಷ್ಟೊ ಬೇಸಿ..' ಎಂದು ಕಟ್ಟೆಯ ಮೇಲಿಂದ ಎದ್ದು ಮೂರು ಹೆಜ್ಜೆ ಇಟ್ಟದ್ದಳೋ ಇಲ್ಲವೋ ಚಂದ್ರಶೇಖರನೂ ಮೇಲೆದ್ದು ಅವಳನ್ನು ಮತ್ತೇ ಹಿಂದಕ್ಕೆ ಎಳೆದುಕೊಂಡು ಕಟ್ಟೆಯ ಮೇಲೆ ನೂಕಿದ. ನೂಕಿದ ರಭಸಕ್ಕೆ ಅವಳು ಕಟ್ಟೆಯ ಮೇಲೆ ಅಂಗಾತ ಬಿದ್ದು ಪೆಟ್ಟಾಗಿ ನರಳ ತೊಡಗಿದಳು. ಅಷ್ಟರಲ್ಲಿಯೇ ಆತ ತನ್ನ ಪ್ಯಾಂಟಿನ ಕಿಸೆಯಲ್ಲಿದ್ದ ಚಾಕುವೊಂದನ್ನು ಹೊರಗೆ ತೆಗೆದು 'ಸಾಯಾಕ ಹೊಳಿ ಯಾಕ ಬೇಕ...ಗಿಡ ಯಾಕ ಬೇಕ ಇಲ್ಲೆ ನಾನ... ಸಾಯಿಸ್ತಿನಿ' ಎನ್ನುತ್ತಾ ಅವಳ ಹೊಟ್ಟೆಗೆ ನಾಲ್ಕೈದು ಬಾರಿ ಚಾಕುವಿನಿಂದ ಬಲವಾಗಿ ಇರಿದಾಗ ಶಶಿರೇಖಾ ಅಮ್ಮಾ... ಎನ್ನುತ್ತಾ ಅಲ್ಲಿಯೇ ಪ್ರಾಣ ಬಿಟ್ಟಳು. ಬೇಡ ಬೇಡ ಎನ್ನುವ ನನ್ನ ಮೂಕ ಕೂಗು ಅವನಿಗೆ ಕೇಳಿಸಲೇ ಇಲ್ಲ. ಅನತಿ ದೂರದಲ್ಲಿ ನಿಂತಿದ್ದ ಇಬ್ಬರೂ ವ್ಯಕ್ತಿಗಳಾದರೂ ಕೇಳಲಿಯೆಂದು ನಾನೆಷ್ಟು ಅರಚಿದರೂ ಅವರಿಗೂ ನನ್ನ ಧ್ವನಿ ಕೇಳಲಿಲ್ಲ.

ಅವಳ ಕಥೆಯನ್ನು ಹೇಳಿಯಾದ ಮೇಲೆ ಜಗದೀಶನಿಗೆ, 'ಆ ಮಗಳು ನರಳುತ್ತಾ ಸಾಯೋದನ್ನ ನೋಡಿಯೂ ಏನೂ ಮಾಡಲಾರ್ದ ಅಸಹಾಯಕ ಸ್ಥಿತಿಯ ನನ್ನ ಪಾಡು ಯಾರಿಗೂ ಬರಬಾರ್ದ ಜಗದೀಶ' ಎಂದು ಪ್ರತಾಪ್‌ಮೋಹನ್ ಹೇಳಿದಾಗ ಜಗದೀಶನ ಕಣ್ಣುಗಳು ಅವನಿಗರಿವಿಲ್ಲದಂತೆ ತೇವವಾದವು.

'ನೀವೇನೋ ನನ್ನ ಮೂರ್ತಿಯನ್ನ ಇಲ್ಲಿ ತಂದು ನಿಲ್ಲಿಸಿರಿ. ಆದರೆ, ಇಂತಾ ಅಮಾನವೀಯ ಘಟನೆಗಳನ್ನು ನೋಡಾಕ ನನ್ನಿಂದ ಆಗವಲ್ದ. ನನ್ನ ಮೂಕ ಅಳಲು ಯಾರಿಗೂ ಕೇಳಾಂಗಿಲ್ಲ.. ನನ್ನ ಮೂರ್ತಿಯನ್ನ ಬ್ಯಾರೆ ಎಲ್ಲಾದ್ರೂ ಸ್ಥಳಾಂತರಿಸ್ರಿ'

'ದಯಮಾಡಿ ಆ ಮಾತ ಹೇಳಬ್ಯಾಡ್ರಿ ಸರ್. ಈ ಸರ್ಕಲ್‌ದಿಂದ, ನಿಮ್ಮ ಪ್ರತಿಮೆಯಿಂದ ಈ ಊರಿಗೆ ಒಂದ ಹೆಸರ ಮತ್ತು ಗೌರವ ಬಂದೈತಿ'

'ಆದರೇನ ಯುವ ಸಮೂಹದ ಈ ಕೀಳುಮಟ್ಟದ ಮನಃಸ್ಥಿತಿಯಿಂದ ಮನಸು ತಲ್ಲಣಗೊಂಡೈತಿ. ಯುದ್ಧಭೂಮ್ಯಾಗ ತಳಮಳಗೊಳ್ಳದ ಮನಸ ಈಗ ತಹತಹಿಸುತ್ತದಂದ್ರ ಪರಿಸ್ಥಿತಿ ಎಂತಾ ವಿಷಮ ಆಗೈತಿ ನೀವ.. ತಿಳ್ಕೊಳ್ರಿ. ಎಷ್ಟಂತ ಇಂತಾ ಘೋರ ಘಟನೆಗಳನ್ನ ನನ್ನ ಕಣ್ಣುಗಳು ನೋಡ್ಬೇಕ. ಹೋಗ್ಲಿ, ಶಶಿರೇಖಾಳ ಸಾವಿಗಾದ್ರೂ ನ್ಯಾಯ ಸಿಗಬೌದಾ...ಹೇಳ್ರಿ?'

'ಖಂಡಿತ ಸರ್, ಆ ಕೆಲಸ ನಾನ ಪಟ್ಟ ಹಿಡಿದ